# ನಿಂದಕರಿರಬೇಕು ಇರಬೇಕು

1. **Ref.:** Shri Purandara Dasara Sahitya Part – 4, Loka Neeti, edited by Shri Betageri Krishna Sharma and Shri Bengeri Huchhu Rayaru, page No. 104.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 176.
3. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 328.
4. **Note:** The wordings given without highlights are as per Ref. 1. The wordings in Ref. 2 and that of the singer are matching and the differences are marked in yellow highlights.

ರಾಗ: ನಾದ ನಾಮ ಕ್ರಿಯ ತಾಳ: ಅಟ

ನಿಂದಕರಿರಬೇಕು ಇರಬೇಕು ನಿಂದಕರಿರಬೇಕು
ಹಂದಿ ಇದ್ದರೆ ಕೇರಿ (ಹ್ಯಾಂಗೆ) ಹೇಗೆ ಶುದ್ಧಿಯೊ (ಹಾಂಗೆ) ಹಾಗೆ ॥ ಪ ॥

ಅಂದಂದು ಮಾಡಿದ ಪಾಪವೆಂಬಾ ಮಲ
ತಿಂದು ಹೋಗುವರಯ್ಯ ನಿಂದಕರು
ವಂದಿಸಿ ಸ್ತುತಿಸುವ ಜನರೆಲ್ಲರೂ ನಮ್ಮ
ಪೊಂದಿದ ಪುಣ್ಯವನೊಯ್ಯುವರಯ್ಯಾ ॥ 1 ॥

ದುಷ್ಟ ಜನರು ಈ ಸೃಷ್ಟಿಯೊಳಿದ್ದರೆ
ಶಿಷ್ಟ ಜನರಿಗೆಲ್ಲ ಕೀರ್ತಿಗಳು
(ಇಷ್ಟಪ್ರದ) (ಇಷ್ಟಪ್ರದರ್ಶಿ) ಶ್ರೀ ಕೃಷ್ಣನೆ ನಿನ್ನೊಳು
ಇಷ್ಟೇ ವರವನು ಬೇಡುವೆನಯ್ಯಾ ॥ 2 ॥

ದುರುಳ ಜನಂಗಳು ಚಿರಕಾಲ ಇರುವಂತೆ
ಕರವ ಮುಗಿದು ವರ ಬೇಡುವೆನು
ಪರಿಪರಿ ತಮಸಿಗೆ ಗುರಿಯಹರಲ್ಲದೆ
ಪರಮ ದಯಾನಿಧೆ ಪುರಂದರ ವಿಠಲ ॥ 3 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಮಾಡಿದ ಕೆಟ್ಟ ಕೆಲಸದ ಕಾವು ಅವನನ್ನು ಕಂಡು ಬಯ್ಯುವವರಿಂದ ಕಡಮೆಯಾಗುತ್ತದೆ; ಒಬ್ಬ ಮಾಡಿದ ಪಾಪ ಬೇರೆಯವರು ಮಾಡುವ ನಿಂದನೆಯಿಂದ ಪರಿಹಾರವಾಗುವುದೆಂದೂ, ಅದು ನಿಂದಕರಿಗೆ ಒದಗುವುದೆಂದೂ ಅಗ್ನಿಪುರಾಣದ ಮಾತಿದೆ. 'ಮಾಡಿದವರ ಪಾಪ ಆಡಿದವರಿಗೆ' ಎಂಬ ಕನ್ನಡ ಗಾದೆಗೆ ಇದೇ ಮೂಲ. ಹಾಗೆಯೇ ದಾನ ಧರ್ಮಾದಿಗಳನ್ನು ಮಾಡಿದಾಗ, ಬೇರೆಯವರು ಹೊಗಳಿದರೆ ಮಾಡಿದವರಿಂದ ಪುಣ್ಯವೂ ಹೊರಟು ಹೋಗುತ್ತದೆ; ಹೊಗಳಿದವರಿಗೆ ಸಲ್ಲುತ್ತದೆ; ಅದಕ್ಕಾಗಿಯೇ ಪುಣ್ಯದ ಕೆಲಸವನ್ನು ಗುಟ್ಟಾಗಿ ಮಾಡಬೇಕೆನ್ನುವುದು ಮತ್ತು ಕೆಟ್ಟವರಿದ್ದು ಕಷ್ಟವನ್ನು ಕೊಡುತ್ತಿದ್ದರೆ, ಅವನ್ನು ತಾಳಿಕೊಳ್ಳುವುದು ತಪಸ್ಸೆನಿಸುತ್ತದೆ; ಸಾಧನೆಯೇ ಆಗಿ ಮಾರ್ಪಡುತ್ತದೆ. ಇದಕ್ಕೆ ಅವಕಾಶ ಮಾಡಿಕೊಡುವ ಜನ ಇರಲೇಬೇಕು; ಇಲ್ಲವಾದರೆ ಸಾಧನೆ ಕೈಗೂಡುವುದಿಲ್ಲ.

**Classification:** Keerthane
**Ankita:** purandara vittala
**Location:** NA
**Category:** swabhava vishleshane, jeevanoddhara, uggaDaNe
**Sub-Category:** bayyi, handi, keri, papa, punya, Krishna, kai, daya,
**Pravachana:** NA
**Explanation:** NA